# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.</u>

## <u>SC.261/2021</u>

**P.W.-01**
**C.W.-01**

| | | |
|---|---|---|
| ಹೆಸರು | : | Somappa |
| ತಂದೆಯ ಹೆಸರು | : | Rangaiah |
| ವಯಸ್ಸು | : | 39 Years |
| ಉದ್ಯೋಗ | : | Coolie |
| ವಾಸಸ್ಥಳ | : | Bannahalli Hundi, T.Narasipura |

**<u>ದಿನಾಂಕಃ 11.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಮ್ಮ. ಚಾಸಾ-2 ಮೋಹನ ಆರೋಪಿಯ ಮಗ. ಚಾಸಾ-3 ಯಶವಂತ ನನ್ನ ಮಗ. ಮೃತ ಲಕ್ಷ್ಮಮ್ಮ ನನ್ನ ತಾಯಿ. ನಾನು ಮತ್ತು ಆರೋಪಿ ಬೇರೆ ಬೇರೆ ವಾಸ ಮಾಡುತ್ತಿದ್ದೆವು. ನಮ್ಮಿಬ್ಬರ ಮನೆಗಳು ಅಕ್ಕಪಕ್ಕದಲ್ಲಿವೆ. ನನ್ನ ತಂದೆ-ತಾಯಿ ನನ್ನೊಂದಿಗೆ ವಾಸ ಮಾಡುತ್ತಿದ್ದರು.

2. ದಿಃ29.07.2021 ರಂದು ನಾನು ಬೆಳಿಗ್ಗೆ ಕೂಲಿ ಕೆಲಸಕ್ಕೆ ಹೋಗಿದ್ದೆ. ಸಂಜೆ 6.00 ಗಂಟೆಗೆ ವಾಪಸ್ಸು ಬಂದಾಗ, ನಮ್ಮ ಮನೆಯ ಮುಂದೆ ಜನ ತುಂಬಿದ್ದರು. ಚಾಸಾ-2 ಮೋಹನ ಬಂದು, ಅಜ್ಜಿ ತೀರಿ ಹೋಗಿದ್ದಾರೆ ಎಂದು ತಿಳಿಸಿದ. ನಾನು ಬಂದು ನನ್ನ ಮಗ ಚಾಸಾ-3 ಯಶವಂತ ಮತ್ತು ಚಾಸಾ-2 ಮೋಹನನ್ನು ವಿಚಾರಿಸಿದೆ. ನನ್ನ ಮಗ ಯಶವಂತ 'ನಾನು ಸಂಜೆ 6.00 ಗಂಟೆಗೆ ಬೈಕನ್ನು ತೊಳೆಯುತ್ತಿದ್ದೆ, ಆಗ ಆರೋಪಿ ಏಕೆ ನಮ್ಮ ಮನೆಯ ಮುಂದೆ ತೊಳೆಯುತ್ತಿದ್ದೀಯ ಎಂದು ಹೊಡೆಯಲು ಬಂದ, ಆಗ ಅಜ್ಜಿ ಅಡ್ಡ ಬಂದರು. ಅವರಿಗೆ ದೊಣ್ಣೆಯ ಏಟು ತಲೆಗೆ ಬಿತ್ತು' ಎಂದು ಹೇಳಿದ. ಆಗ ನನ್ನ ತಾಯಿ ಕೆಳಕ್ಕೆ ಬಿದ್ದರಂತೆ. ನೋಡಿದಾಗ ಅವರ ಜೀವ ಹೋಗಿತ್ತು ಎಂದು ನನ್ನ ಮಗ ತಿಳಿಸಿದ. ಚಾಸಾ-2 ಮೋಹನ ಸಹ ಇದೇ ವಿಷಯವನ್ನು ಹೇಳಿದ. ನಾನು ಬಂದು ನೋಡಿದಾಗ ನನ್ನ

ತಾಯಿಯ ಶವವನ್ನು ನನ್ನ ತಮ್ಮ ಆರೋಪಿಯ ಮನೆಯ ಮುಂದೆ ಇರಿಸಿದ್ದರು. ನನ್ನ ತಾಯಿಗೆ ಆಗಿದ್ದಂತಹ ಏಟು ಕಾಣಿಸುತ್ತಿರಲಿಲ್ಲ.

3. ನಂತರ ನನ್ನ ತಾಯಿಯ ಶವವನ್ನು ಆಟೋದಲ್ಲಿ ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ತಂದೆವು. ನಂತರ ನಾನು ಪೊಲೀಸರಿಗೆ ನನ್ನ ತಮ್ಮನ ವಿರುದ್ಧ ದೂರನ್ನು ನೀಡಿದೆ. ನಾನು ಸಹಿ ಹಾಕುತ್ತೇನೆ. ಈಗ ನೋಡಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದೂರು ಆಗಿದ್ದು, ಅದನ್ನು ನಿಪಿ–1 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–1(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

4. ಮರುದಿನ ಬೆಳಿಗ್ಗೆ 12.00 ಗಂಟೆಯ ಸಮಯಕ್ಕೆ ಪೊಲೀಸರು ಮಹಜರಿಗಾಗಿ ಪುನಃ ಮನೆಯ ಹತ್ತಿರ ಬಂದಿದ್ದರು. ಸ್ಥಳವನ್ನು ಚಾಸಾ–2 ಮೋಹನ ಪೊಲೀಸರಿಗೆ ತೋರಿಸಿದ್ದ. ಪೊಲೀಸರು ಅಲ್ಲಿ ಮಹಜರ್ ಮಾಡಿ ಒಂದು ದೊಣ್ಣೆ ಹಾಗೂ ಬಳೆಯ ಚೂರುಗಳನ್ನು ಅಮಾನತು ಪಡಿಸಿಕೊಂಡಿದ್ದರು. ಮಹಜರ್ ಕಾಲಕ್ಕೆ ಚಾಸಾ–4 ಮತ್ತು 5 ರವರು ಇದ್ದರು. ಆ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಸ್ಥಳ ಮತ್ತು ಅಮಾನತು ಮಹಜರ್ ಆಗಿದ್ದು, ಅದನ್ನು ನಿಪಿ–2 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–2(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ಮಹಜರ್ ಕಾಲಕ್ಕೆ ಫೋಟೋಗಳನ್ನು ತೆಗೆಯಲಾಯಿತು. ಅವುಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳು ಒಟ್ಟು 4 ಇದ್ದು, ಅವುಗಳನ್ನು ನಿಪಿ–3 ರಿಂದ 6 ಎಂದು ಗುರುತು ಪಡಿಸಿಕೊಳ್ಳಲಾಯಿತು. ಆ ದಿನ ಪೊಲೀಸರು ಅಮಾನತು ಪಡಿಸಿಕೊಂಡಿದ್ದ ದೊಣ್ಣೆ ಮತ್ತು ಬಳೆಯ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿದ್ದ ಬಳೆಯ ಚೂರುಗಳು ಮತ್ತು ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದೊಣ್ಣೆಯನ್ನು ಮು.ಮಾ.1 ಎಂತಲೂ, ಬಳೆಯ ಚೂರುಗಳನ್ನು ಮು.ಮಾ.2 ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

5. ನಮ್ಮ ತಾಯಿಯ ಶವದ ಫೋಟೋವನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ–7 ಎಂದು ಗುರುತು ಪಡಿಸಿಕೊಳ್ಳಲಾಯಿತು. ಆ ದಿನ ನನ್ನ ತಾಯಿ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇದ್ದ ಸೀರೆ ಮತ್ತು ರವಿಕೆ ಮತ್ತು ಲಂಗವನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ.3 ರಿಂದ 5 ಎಂದು ಗುರುತು ಪಡಿಸಿಕೊಳ್ಳಲಾಯಿತು.

6. ಮಹಜರ್ ಮಾಡಿದ ದಿನ, ಶವ ಪರೀಕ್ಷೆಯನ್ನು, ದೇಹವನ್ನು ನಮಗೆ ಹಸ್ತಾಂತರಿಸಿದ್ದರು.

**(ಶ್ರೀ. ಹೆಚ್.ಎಸ್.ಎಂ. ವಕೀಲರು ಹಾಜರಾಗಿ, ಆರೋಪಿಯ ಕಡೆಯವರು ಬಂದು ಕಡತವನ್ನು ಮತ್ತು Memo of Retirement ನ್ನು ನನ್ನಿಂದ ಪಡೆದುಕೊಂಡು ಹೋಗಿರುತ್ತಾರೆ ಎಂದಿರುತ್ತಾರೆ. ಆರೋಪಿಯನ್ನು ಪಾಟೀಸವಾಲುಗೊಳಿಸಲು ಕೇಳಿದಾಗ, ನನಗೆ ಅಷ್ಟೋಂದು Knowledge ಇರುವುದಿಲ್ಲ, ಆದ್ದರಿಂದ, ಆಗುವುದಿಲ್ಲ ಎಂದಿರುತ್ತಾನೆ. ಹೀಗಾಗಿ ಪಾಟೀಸವಾಲನ್ನು "ಇಲ್ಲ." ಎಂದು ತೆಗೆದುಕೊಳ್ಳಲಾಯಿತು.)**

**ಆರೋಪಿಯನ್ನು, ಸರ್ಕಾರಿ ವಕೀಲರನ್ನು ನಿನಗೆ ಕೊಡಲಾಗುವುದು ಎಂದು ಹೇಳಿದಾಗ, ಈ ಬಗ್ಗೆ ಮುಂದಿನ ದಿನಾಂಕದಂದು ತಿಳಿಸುತ್ತೇನೆ ಎನ್ನುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.